2) ಯಾವುದೇ ಉದ್ದಿಮೆಯು ಪ್ರಗತಿ ಹೊಂದಲು ಹಲವಾರು ಮಾರ್ಗಗಳಿವೆ. ಸಿಎಂಡಿಯವರೊಬ್ಬರಿಂದಲೇ ಸಾಧ್ಯವಾಗುವುದಿಲ್ಲ. ಪಿ.ಎಸ್.ಆರ್.ಸಿ. ಯವರು ಈಗಾಗಲೇ ಕೆಲವು ಮಾರ್ಗಸೂಚಿಗಳನ್ನು ಹೊರಡಿಸಿರುತ್ತಾರೆ.

3) ಸರ್ಕಾರದಿಂದ ನಿಗಮಕ್ಕೆ ಇಂತಹ ಸೂಚನೆಯನ್ನು ನೀಡಿರುವುದಿಲ್ಲ. ಎನ್‌ಜಿಇಎಫ್ ನಿಗಮವು ಬಳಕೆದಾರರಿಂದ ಸ್ವೀಕರಿಸಲಾದ ಯಾವುದೇ ಆದೇಶಗಳನ್ನು ತಿರಸ್ಕರಿಸಿರುವುದಿಲ್ಲ. ಎನ್‌ಜಿಇಎಫ್ ನಿಗಮವು ಬಳಕೆದಾರರಿಂದ ಬರುವ ಆದೇಶಗಳನ್ನು ವಿತರಣೆ ಮಾಡಲು ಕಾಯ್ದಿರಿಸಿದೆ. ಹಾಲಿ ಆರ್ಥಿಕ ವರ್ಷದ ಅಂದರೆ ಜನವರಿ 2001ರವರೆಗೆ ಈಗಾಗಲೇ ಬಂದಿರುವ ಹಣ ರೂ. 80.7 ಕೋಟಿಗಳಷ್ಟು ಆರ್ಡರ್‌ಗಳನ್ನು ಸ್ವೀಕರಿಸಲಾಗಿದೆ.

4) ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ನಿಗಮವು ನಷ್ಟದಲ್ಲಿರುವುದರಿಂದ ಸ್ವಯಂ ನಿವೃತ್ತಿ ಯೋಜನೆಗೆಂದು ಯಾವುದೇ ಪ್ರತ್ಯೇಕ ನಿಧಿಯನ್ನು ಹೂಡಿರುವುದಿಲ್ಲ.

ಹಾಸನ ಜಿಲ್ಲೆಯ ಪೊಲೀಸ್ ಠಾಣೆಗಳ ಮಾಹಿತಿ:

109 (47) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಹಾಸನ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ;

2) ಹಾಸನ ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಯ ಕೊರತೆ ಇರುವುದನ್ನು ಸರ್ಕಾರ ಮನಗಂಡಿದೆಯೇ;

3) ಹಾಗಿದ್ದಲ್ಲಿ, ಹಾಸನ ಜಿಲ್ಲೆಯಲ್ಲಿನ ಪೊಲೀಸ್ ಠಾಣೆಗಳ ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ಹಾಸನ ಜಿಲ್ಲೆಯಲ್ಲಿ ಒಟ್ಟು 26 ಪೊಲೀಸ್ ಠಾಣೆಗಳಿವೆ.

2) ಸಿಬ್ಬಂದಿ ಕೊರತೆ ಇರುವುದಿಲ್ಲ.

3) ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವುದು:

110 (48) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿ ನೂತನವಾಗಿ ತೆರೆಯಲು ಉದ್ದೇಶಿಸಿರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ತೆರೆಯಲು ಉದ್ದೇಶಿಸಲಾಗಿದೆ;

2) ಹಾಸನ ಜಿಲ್ಲೆಯಲ್ಲಿ ಹೊಸದಾಗಿ ಈ ಬಾರಿ ಎಷ್ಟು ಪೊಲೀಸ್ ಠಾಣೆ ತೆರೆಯಲಾಗುವುದು; ತಾಲ್ಲೂಕುವಾರು ವಿವರ ನೀಡುವುದು;

3) ಹಾಗಿದ್ದಲ್ಲಿ, ಈ ಠಾಣೆಯನ್ನು ಎಂದಿನಿಂದ ತೆರೆಯಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ರಾಜ್ಯದಲ್ಲಿ ನೂತನವಾಗಿ 10 ಪೊಲೀಸ್ ಠಾಣೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ತೆರೆಯಲು ಸರ್ಕಾರವು ಆದೇಶ ಸಂಖ್ಯೆ: ಹೆಚ್.ಡಿ 95 ಪಿಒಪಿ 2000 ದಿನಾಂಕ: 4-5-2000 ಮತ್ತು ಹೆಚ್.ಡಿ. 189 ಪಿಒಪಿ 2000 ದಿನಾಂಕ: 27-12-2000ರಲ್ಲಿ ಮಂಜೂರಾತಿಯನ್ನು ನೀಡಿದೆ.

ಅ) ಬಟ್ಲಳ್ಳಿ ಪೊಲೀಸ್ ಠಾಣೆ- ಕೋಲಾರ ಜಿಲ್ಲೆ.

ಆ) ಹಂದನಕೆರೆ ಪೊಲೀಸ್ ಠಾಣೆ - ತುಮಕೂರು ಜಿಲ್ಲೆ.

ಇ) ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆ - ದಕ್ಷಿಣ ಕನ್ನಡ ಜಿಲ್ಲೆ

ಈ) ಗುಲ್ಬರ್ಗಾ ನಗರ ಹೆಚ್ಚುವರಿ ಸಂಚಾರಿ ಪೊಲೀಸ್ ಠಾಣೆ - ಗುಲ್ಬರ್ಗಾ ಜಿಲ್ಲೆ

ಉ) ವಿದ್ಯಾನಗರ ಪೊಲೀಸ್ ಠಾಣೆ- ದಾವಣಗೆರೆ ಜಿಲ್ಲೆ.

ಊ) ಹುಬ್ಬಳ್ಳಿ ದಕ್ಷಿಣ ಸಂಚಾರಿ ಪೊಲೀಸ್‌ಠಾಣೆ - ಹುಬ್ಬಳ್ಳಿ-ಧಾರವಾಡ ನಗರ.

ಋ) ಆದರ್ಶನಗರ ಪೊಲೀಸ್ ಠಾಣೆ- ಬಿಜಾಪುರ ಜಿಲ್ಲೆ.

ಋೂ) ವಿಜಯನಗರ ಪೊಲೀಸ್ ಠಾಣೆ- ಮೈಸೂರು ಜಿಲ್ಲೆ.

ಎ) ಬೆಟ್ಟದಪುರ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವುದು - ಮೈಸೂರು ಜಿಲ್ಲೆ.

ಏ) ನಂದಿನಿ ಬಡಾವಣೆ ಪೊಲೀಸ್ ಠಾಣೆ - ಬೆಂಗಳೂರು ನಗರ.

2) ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆಯಲ್ಲಿನ ಪೊಲೀಸು ಹೊರ ಠಾಣೆಯನ್ನು ಪೊಲೀಸು ಠಾಣೆಯಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ.

3) -ಆದೇ-

ಸಕಲೇಶಪುರ ತಾಲ್ಲೂಕಿನಲ್ಲಿ ಕಿರು ಜಲ ವಿದ್ಯುತ್ ಯೋಜನೆ ಪ್ರಾರಂಭಿಸುವುದು:

112 (50) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನಲ್ಲಿ ಕಿರು ಜಲ ವಿದ್ಯುತ್ ಯೋಜನೆ ಪ್ರಾರಂಭಿಸಲು ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ ಕಿರು ಜಲ ವಿದ್ಯುತ್ ಯೋಜನೆ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; ವಿವರ ನೀಡುವುದು?